

ಸಂಪಾದಕೀಯ

# ಒಳಿತು-ಕೆಡುಕುಗಳ ಏರಿಳಿತದ ನಡುವೆ

‘‘ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ...’’ —ಗೀತೆಯಲ್ಲಿ ಇಂತಹ ಒಂದು ಪರಿಸ್ಥಿತಿಯನ್ನು ಚಿತ್ರಿಸಲಾಗಿದೆ. ಗೀತೋಪದೇಶ ಮಾಡುವ ಸನ್ನಿವೇಶವೂ ಅಂತಹುದೆ. ಧರ್ಮದ ಗ್ಲಾನಿ ಎಂದರೇನು? ಮಾನವರಲ್ಲಿ ಒಳ್ಳೆಯತನ, ಧರ್ಮಬುದ್ಧಿ, ನೈತಿಕತೆ, ಪರಸ್ಪರ ನಂಬಿಕೆ ಇವೆಲ್ಲ ಬತ್ತಿಹೋಗಿ ಕೆಡಕು, ದುಷ್ಟತನ, ವಂಚನೆ, ಕ್ರೌರ್ಯ ಮೊದಲಾದ ಕೆಟ್ಟ ಗುಣಗಳು ರಾರಾಜಿಸುತ್ತವೆ; ಎಲ್ಲಿ ನೋಡಿದರೂ ಹಿಂಸಾತ್ಮಕ ಪ್ರವೃತ್ತಿ ಕಂಡುಬರುತ್ತದೆ. ಅಂತಹ ಸನ್ನಿವೇಶದಲ್ಲಿ ಜೀವನವೇ ದಾರುಣವೆನಿಸುತ್ತದೆ. ಜನರ ಹಾಹಾಕಾರ, ಸಂಕಟ, ದೈನ್ಯಗಳನ್ನು ಕೇಳುವವರೇ ಇಲ್ಲವಾಗುತ್ತಾರೆ. ಇಂಥವರನ್ನು ನಿಯಮಕ್ಕನುಸಾರವಾಗಿ ಮಟ್ಟಹಾಕುವ, ಶಿಸ್ತಿಗೊಳಪಡಿಸುವ ಯಾರೂ ಇಲ್ಲವೆ? ಬೇಲಿಯೇ ಹೊಲ ತಿನ್ನುವ ಹಾಗಾಯಿತೆ? — ಈ ಪ್ರಶ್ನೆ ಎಲ್ಲರಲ್ಲೂ ಮೂಡುವುದು. ಆದರೆ ಎಲ್ಲರೂ ಅಸಹಾಯಕರು. ಗೀತಾವಾಕ್ಯವನ್ನು ಬಲ್ಲವರು ನಿರೀಕ್ಷೆಯನ್ನು ಹೊತ್ತು ಕಾಯುತ್ತಾರೆ: ಧರ್ಮಗ್ಲಾನಿ ಬಂದೊದಗಿದೆ. ಆದರೆ ಅಂಥ ವೇಳೆ ಹುಟ್ಟಿ ಬರುತ್ತೇನೆ ಎಂದು ಭರವಸೆ ನೀಡಿದ ಭಗವಂತನೆಲ್ಲಿ ಹೋದ? ಭಗವಂತನ ವಾಣಿಯೂ ಹುಸಿಯಾಗಲು ಸಾಧ್ಯವೆ? ಎಷ್ಟೇ ಶ್ರದ್ಧೆಯನ್ನು ಹೊಂದಿದ್ದರೂ ದೀನರಕ್ಷಕ, ದುಷ್ಟಶಿಕ್ಷಕ ಭಗವಂತನಿಗೆ ದುಃಖಿತರ ಮೊರೆ ಕೇಳಿಸಲಾರದೆಂದೇ ಹಲವರು ಭಾವಿಸುತ್ತಾರೆ. ಕೆಲವು ಜನರಂತೂ ‘ಅಂತಹ ದೇವರಿದ್ದರೆ ಬರಲೇಬೇಕಿತ್ತು; ಬರಲಿಲ್ಲ... ಆದ್ದರಿಂದ ಅವನಿಲ್ಲ’ ಎಂದು ತೀರ್ಮಾನಿಸಿಬಿಡುತ್ತಾರೆ. ಅವಸರದ ತೀರ್ಮಾನದಿಂದ ನಾಸ್ತಿಕರಾಗುವ ಇಂಥವರು ತಮ್ಮೊಳಗನ್ನೆಲ್ಲ ಹತಾಶೆ, ನಿರಾಸೆಗಳಿಂದ ತುಂಬುತ್ತಾರೆ. ಇಷ್ಟಕ್ಕೂ ಪ್ರಪಂಚದಲ್ಲಿ ಅಧರ್ಮ ತಾಂಡವವಾಡಲು ಕಾರಣ ಯಾರು? ಯಾವ ಶಕ್ತಿಗಳು ಅಂಥ ಪರಿಸ್ಥಿತಿಗೆ ಕಾರಣ?

### ಕೆಡುಕಿನ ಮೂಲ

ಯಾವುದೋ ಗ್ರಹದಿಂದ, ದೂರದ ಪ್ರಪಂಚದಿಂದ ದುಷ್ಟಶಕ್ತಿಗಳು ಭೂಮಿಗೆ ಬಂದು ಬೀಳುವುದಿಲ್ಲ. ಮಾನವನಲ್ಲೇ ಎಲ್ಲ ಕೆಡುಕುಗಳೂ ಮನೆಮಾಡಿವೆ. ಯಾವ ಸಮಸ್ಯೆ ಮೇಲೆದ್ದಾಗಲೂ ನಾವು ಕೇಳುವ ಪ್ರಶ್ನೆಯಿದು : ಸಮಸ್ಯೆಯ ಮೂಲ ಯಾವುದು? ಯಾವ ಕಾರಣಕ್ಕಾಗಿ ಹೀಗಾಯಿತು? ಕಾರಣ ಹುಡುಕಿ ತೆಗೆದರೆ, ಅದಕ್ಕೆ ಪರಿಹಾರ ಕಾಣಬಹುದಂತೆ. ಆದರೆ ಎಲ್ಲ ತೊಂದರೆ, ಕೆಡುಕು, ದುಷ್ಟತನಗಳ ಮೂಲ ಯಾವುದು, ಅದಕ್ಕೆ ಕಾರಣಗಳೇನು ಎಂಬುದೇ ಅಗೋಚರವಾಗಿ ಹೋದರೆ? ಸಮಸ್ಯೆಗಳು ಇನ್ನಷ್ಟು ಹೆಚ್ಚುತ್ತ ಹೋಗುವುವು. ಜನರು ತತ್ತರಿಸುತ್ತಾರೆ. ಉದಾಹರಣೆಗೆ ಲಂಚಗುಳಿತನ, ಭ್ರಷ್ಟಾಚಾರ ಇವನ್ನೇ ನೋಡೋಣ. ನಮ್ಮ ದೇಶದಲ್ಲಿ ಇವು ಇಂದು ಎಲ್ಲೆಡೆ ವ್ಯಾಪಕವಾಗಿವೆ ಎಂದು ಎಲ್ಲರಿಗೂ ಗೊತ್ತಿದೆ. ಇದು ಕೆಟ್ಟ ಚಾಳಿಯೆಂಬುದನ್ನು ಎಲ್ಲರೂ ಬಲ್ಲರು. ಆದರೆ ಇಂಥ ಪ್ರವೃತ್ತಿ ಎಲ್ಲಿ ಹುಟ್ಟಿಕೊಂಡಿತು, ಯಾರು ಅದನ್ನು ಹುಟ್ಟುಹಾಕಿದರು, ಯಾರೂ ಅದನ್ನು ತಡೆಯಲಿಲ್ಲವೇಕೆ, ಹೀಗಾಗಲು ನಾವು ಸೋತಿದ್ದೆಲ್ಲಿ— ಇವನ್ನೆಲ್ಲ ವಿಶ್ಲೇಷಣೆ ಮಾಡುತ್ತ ಹೋದರೆ ನಾವು ಯಾವ ಒಂದು ನೆಲೆಯನ್ನೂ ತಲುಪಲಾರೆವು. ಎಲ್ಲದಕ್ಕೂ ರಾಜಕೀಯವನ್ನೇ ಹೊಣೆಗಾರಿಕೆ ಮಾಡಿಕೊಳ್ಳಬೇಕಾದೀತು. ಕೆಟ್ಟ ನೇತಾರರನ್ನು ಸೃಷ್ಟಿಸುವವರೂ ಪ್ರಜೆಗಳೇ ಎಂದು, ಜನಸಾಮಾನ್ಯರನ್ನೇ ಗುರಿಯಾಗಿಸುವವರೂ ಇದ್ದಾರೆ. ಜನರನ್ನು ದೂರುವ ಹಾಗಿಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯತ್ತ ಬೆರಳು ತೋರುವ ಹಾಗಿಲ್ಲ, ಆಡಳಿತಾಧಿಕಾರಿಗಳನ್ನು ಪ್ರಶ್ನಿಸುವಂತಿಲ್ಲ — ಅಂದರೆ ಎಲ್ಲವೂ ಸರಿಯಾಗಿದೆ ಎನ್ನಬೇಕೆ? ಹಾಗಿದ್ದರೆ ತಪ್ಪಿದ್ದೆಲ್ಲಿ?

ಸಮಸ್ಯೆ ಇದೊಂದೇ ಅಲ್ಲ. ಪ್ರಪಂಚ ಬದಲಾಗುತ್ತಾ ಹೋದಂತೆ ಜೀವನ ಸಂಕೀರ್ಣವಾಗುತ್ತದೆ; ಹಿಂದಿಲ್ಲದ ಹಲವು ಸಮಸ್ಯೆಗಳು ಹೊಸದಾಗಿ ಉದ್ಭವವಾಗುತ್ತವೆ. ಮಾಧ್ಯಮಗಳು (ಸಾಮಾಜಿಕ ಮಾಧ್ಯಮಗಳೂ ಸೇರಿದಂತೆ) ಹಿಂದೆಂದೂ ಇಲ್ಲದಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಆದರೆ ಈ ಕಾರಣದಿಂದ ಪ್ರಪಂಚದಲ್ಲಿ ಬದಲಾವಣೆ ಎಂಬುದೇ ಇಲ್ಲವಾಗುವುದಿಲ್ಲ. ಹೊಸ ಹೊಸ ಸಂಗತಿಗಳು ಹೊರಬರುತ್ತಲೇ ಇರುತ್ತವೆ. ಅದಕ್ಕೆ ಅನುಗುಣವಾಗಿ ಹೊಸ ಸಮಸ್ಯೆ, ಬಿಕ್ಕಟ್ಟು, ಅನಾಹುತಗಳೂ ಜರಗುತ್ತವೆ. ಅವನ್ನು ಪರಿಹರಿಸಲು ಎಷ್ಟೋ ಮಂದಿ ಹೋರಾಡಬೇಕಾಗುತ್ತದೆ. ಒಂದು ಹಂತಕ್ಕೆ ಸಮಸ್ಯೆ ಪರಿಹಾರವಾಯಿತು ಎನ್ನುವಷ್ಟರಲ್ಲಿ ಆಗಬಾರದಷ್ಟು ಅನಾಹುತ ಆಗಿರುತ್ತದೆ.

ಮಾನವನ ಮೂಲ ಪ್ರವೃತ್ತಿಯಲ್ಲೇ ಸ್ವಾರ್ಥ, ದ್ವೇಷ, ದುರಾಸೆ, ಅಸಹನೆ, ಕ್ರೌರ್ಯ ಮುಂತಾದ ಗುಣಗಳಿಲ್ಲದಿದ್ದರೆ ಯಾವ ಸಮಸ್ಯೆಗಳೂ ಇರುತ್ತಿರಲಿಲ್ಲ. ಆದರೆ ಅಂತಹ ಮಾನವ ಜೀವನ ಎಂದಾದರೂ ಇತ್ತೆ? ಮಾನವನ ಅಸ್ತಿತ್ವ ಎಂದಿನಿಂದ

ಕಂಡುಬಂದಿತೋ, ಆಗಿನಿಂದಲೂ ಈ ಪ್ರವೃತ್ತಿಗಳಿದ್ದವು; ಅನೇಕ ವೇಳೆ ವ್ಯಕ್ತವಾಗುತ್ತಿರಲಿಲ್ಲ — ಇನ್ನು ಹಲವು ಬಾರಿ ವ್ಯಕ್ತವಾಗಿವೆ. ಆದರೆ ಮಾನವನ ಮನಸ್ಸು-ಬುದ್ಧಿಗಳು ವಿಕಾಸ ಹೊಂದಿದವು. ಭಾವನೆ, ಕಲ್ಪನೆ, ನೈತಿಕತೆ ಅಭಿವೃದ್ಧಿ ಹೊಂದಿದವು. ಸಾಮಾಜಿಕ ನಡವಳಿಕೆ, ನಿಯಮ, ಶಿಸ್ತುಬದ್ಧತೆ, ಸಂಯಮ, ಶಾಂತಿ-ನೆಮ್ಮದಿಯ ಬಯಕೆ ಅವನಲ್ಲಿ ಹೆಚ್ಚಾಗತೊಡಗಿತು. ಎಲ್ಲೆಡೆ ಆನಂದ, ಯಾವಾಗಲೂ ಶಾಂತಿ-ಸುಖ ಇವನ್ನೇ ಮಾನವ ಬಯಸತೊಡಗಿದ. ಕೇವಲ ಹಸಿವು, ನಿದ್ರೆ, ಮೈಥುನ ಹಾಗೂ ಅಗತ್ಯ ವಸ್ತುಗಳ ಪೂರೈಕೆ ಇವಿಷ್ಟೇ ಇದ್ದರೆ ಸಾಲದು; ಎಲ್ಲರೂ ನೆಮ್ಮದಿಯಿಂದ ಇರಬೇಕಾದರೆ ಮಾನವನಿಗೆ ಸಾಮೂಹಿಕ ಜೀವನ, ಪರಸ್ಪರ ಒಟ್ಟಾಗಿ ಬಾಳುವ ಕಲೆ ಅಗತ್ಯ ಎಂದು ಅವನಿಗೆ ಅರ್ಥವಾಯಿತು. ಕೆಡುಕನ್ನು ನಿಗ್ರಹಿಸುವ, ಸಂಯಮಕ್ಕೆ ಒಳಪಡಿಸುವ ಅಗತ್ಯ ಸಾಮಾಜಿಕವಾಗಿ ಎಷ್ಟು ಮುಖ್ಯವೋ, ಧಾರ್ಮಿಕವಾಗಿ ಅಥವಾ ಆಧ್ಯಾತ್ಮಿಕವಾಗಿಯೂ ಬಹಳ ಮುಖ್ಯವೆಂಬುದು ಸಮಾಜದ ಮೌಲ್ಯವಾಯಿತು. ಆದರೆ ಅಷ್ಟರಿಂದ ಎಲ್ಲವೂ ಪರಿಹಾರವಾಗಲಿಲ್ಲ. ಒಳಿತು ವೃದ್ಧಿಯಾಗತೊಡಗಿತು; ಆದರೆ ಕೆಡುಕುಗಳು ಮರೆಯಲ್ಲೇ ವಿಜೃಂಭಿಸತೊಡಗಿದವು. ಒಳಿತು-ಕೆಡುಕಿನ ಮುಸುಕಿನ ಗುದ್ದಾಟ ಅನಾದಿಕಾಲದಿಂದಲೇ ಮುಂದುವರಿದುಕೊಂಡು ಬಂತು.

## ಬುದ್ಧಿ, ವಿವೇಕಗಳ ಸೋಲು

ಪ್ರವಾದಿಗಳ, ಅವತಾರಗಳ ಉದಯದಿಂದ ಪ್ರಪಂಚದ ಒಂದೊಂದು ಭಾಗದಲ್ಲಿ ಅಸಾಧಾರಣ ರೀತಿಯ ಧಾರ್ಮಿಕ, ನೈತಿಕ ಜಾಗೃತಿಯಾದುದನ್ನು ನಾವು ನೋಡುತ್ತೇವೆ. ಅವರ ವ್ಯಕ್ತಿತ್ವ ಎಷ್ಟು ಎತ್ತರಕ್ಕೆ ಬೆಳೆದಿತ್ತು ಎಂಬುದನ್ನು ಜನಸಾಮಾನ್ಯರು ಅರಿಯಲಾರರು; ಆದರೆ ಇಡೀ ಸಮಾಜವೇ ಏಕಸ್ವರದಿಂದ ಅವರನ್ನು ಗೌರವಿಸುವುದು, ಅನುಸರಿಸುವುದು. ಅವರ ಮೇರು ವ್ಯಕ್ತಿತ್ವದ ಪ್ರಭಾವ ಬಹಳ ವಿಸ್ತಾರವಾಗಿ ಹರಡಿ, ಒಂದು ಜನಾಂಗದ, ಒಂದು ಭೂಖಂಡದ ಜನಸಮುದಾಯವೇ ಅವರ ಹೊಸ ಭಾವವನ್ನು ಸ್ವೀಕರಿಸುವುದು. ಹೀಗೆ ಉಂಟಾದ ಪ್ರಭಾವ ಅನೇಕ ಶತಮಾನಗಳವರೆಗೂ ಮುಂದುವರಿಯುವುದನ್ನು ನಾವು ನೋಡುತ್ತೇವೆ. ಮಹಾತ್ಮರ ಆದರ್ಶ, ಧ್ಯೇಯಗಳ ನೆರಳಿನಲ್ಲಿ ಬದುಕುವ ಜನರು ಎಂತಹ ಗಂಡಾಂತರವೇ ಬಂದರೂ ಧೈರ್ಯ ತಾಳುತ್ತಾರೆ, ಭರವಸೆಯ ಬದುಕನ್ನು ಕಂಡುಕೊಳ್ಳುತ್ತಾರೆ.

ಆದರೆ ಇತಿಹಾಸದಲ್ಲಿ ಕಂಡಬರುವಂತೆ, ಕೆಲವೊಮ್ಮೆ ಅಂಧಕಾರಯುಗ ಕಾಣಿಸಿಕೊಳ್ಳುವುದು. ಪ್ರವಾದಿಗಳ, ಮಹಾತ್ಮರ ಪ್ರಭಾವ ಕಡಿಮೆಯಾಗಿ, ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಅಧರ್ಮ, ಅನಾಚಾರ, ಯುದ್ಧ-ಕ್ರೌರ್ಯವೇ ಮುಂತಾದ ಪ್ರವೃತ್ತಿಗಳು ತಾಂಡವವಾಡುವವು. ಪ್ರಜ್ಞಾವಂತ ನಾಗರಿಕರು ಆಗ ಚಿಂತೆಗೊಳಗಾಗುತ್ತಾರೆ: ''ಎಲ್ಲಿಗೆ ಹೋಯಿತು ನಮ್ಮ ಜನರ ವಿವೇಕ? ಇಷ್ಟೊಂದು ಉತ್ತಮ ವಿಚಾರ, ಬುದ್ಧಿವಂತಿಕೆ, ಆದರ್ಶಗಳಿದ್ದರೂ ಜನರಿಗೆ ಸ್ವಾರ್ಥ, ವಂಚನೆ, ಅನಾಚಾರಗಳಲ್ಲಿ ಮನಸ್ಸು ತೊಡಗುವುದೇಕೆ? ಪ್ರಪಂಚ ಕೆಟ್ಟುಹೋಯಿತು!'' ಎಂದು ಅವರು ಹಳಿಯುತ್ತಾರೆ. ಕಾಲ-ದೇಶ ಭೇದವಿಲ್ಲದೆ ಈ ರೀತಿ ಉನ್ನತಿ-ಅವನತಿಗಳು ಜರಗುತ್ತವೆ. ಆದರೆ ಎಲ್ಲ ಕೆಡುಕನ್ನೂ ನಾಶಗೊಳಿಸುವ, ಸುಖ-ಶಾಂತಿ-ಸಮೃದ್ಧಿ-ಆನಂದಗಳ ಬದುಕನ್ನು ಶಾಶ್ವತವಾಗಿಸುವ ಕನಸನ್ನು ಪ್ರತಿಯೊಬ್ಬರೂ ಕಾಣುತ್ತಾರೆ. ಆದರೆ ತಕ್ಷಣವೇ ಅಂಥ ಬದಲಾವಣೆ ಕಾಣದೆ ಹೋದಾಗ, ಜನರು ಹತಾಶೆಗೊಳಗಾಗುತ್ತಾರೆ. ಮಾನವನ ಬುದ್ಧಿವಂತಿಕೆ, ವಿವೇಕಗಳೂ ಅವನ ದುಷ್ಟ ಪ್ರವೃತ್ತಿಯೆದುರು ಸೋತು ತಲೆಬಾಗಿತು ಎಂದೇ ಭಾವಿಸುತ್ತಾರೆ.

## ಸತ್ಯ, ಶಾಂತಿ, ನೀತಿಗಳ ಅರ್ಥ

ವಿವಿಧ ಧರ್ಮಗಳಲ್ಲಿ ಅತ್ಯುನ್ನತವಾದ ಆದರ್ಶ, ಮೌಲ್ಯ, ನೀತಿಗಳು ರೂಪಿಸಲ್ಪಟ್ಟಿರುವುದು ಅಲ್ಲಿ ಮೂಡಿ ಬಂದ ಪ್ರವಾದಿಗಳ, ಅವತಾರ ಪುರುಷರ ಅಥವಾ ಸಾಧು-ಸಂತರ ಜೀವನಾನುಭವದಿಂದ. ಯಾವುದು ಒಳಿತು, ಯಾವುದು ಕೆಡುಕು; ಯಾವುದು ಸತ್ಯ ಹಾಗೂ ಯಾವುದು ಅಸತ್ಯ; ಶ್ರೇಷ್ಠ ಜೀವನವನ್ನು ಬದುಕುವ ಬಗೆ ಹೇಗೆ — ಈ ಬಗೆಯ ತತ್ತ್ವ, ನೀತಿಗಳನ್ನು ಅವರು ಜನರಿಗೆ ಹೇಳಿಕೊಡುತ್ತಾರೆ. ಈ ಎಲ್ಲ ನೀತಿಗಳ ಸಾರ ಒಂದೇ: 'ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಿ, ಉತ್ತಮ ಜೀವನ ನಡೆಸಿ. ಕೆಡುಕಿನ ಮಾರ್ಗ ತುಳಿಯಬೇಡಿ. ಇದರಿಂದ ನಿಮಗೆ ಸುಖ, ಶಾಂತಿ, ನೆಮ್ಮದಿ ದೊರಕುವುದು.' ಆದರೆ ಈ ನೀತಿ, ನಿಯಮಗಳನ್ನು ಪಾಲಿಸಲು ಒಂದು ಊರುಗೋಲು ಬೇಡವೆ? ದೇವರು ಎಂಬುದೇ ಅಂತಹ ಊರುಗೋಲು. ಭಗವಂತ ಎಂಬ ಭಾವನೆ ಕೇವಲ ಕಲ್ಪನೆಯಾಗಿದ್ದರೆ, ಸತ್ಯವಲ್ಲದೆ ಹೋಗಿದ್ದರೆ ಮಾನವನಿಗೆ ಒಳಿತನ್ನು ಆಚರಿಸಲು, ಕೆಡುಕನ್ನು ತೊರೆಯಲು ಯಾವ ಕಾರಣವೂ ಇರಲಾರದು. ಎಲ್ಲರಿಗೂ ಒಳಿತಾಗಲಿ, ಎಲ್ಲರೂ ಸುಖವಾಗಿರಲಿ, ಎಲ್ಲರಿಗೂ ಆನಂದ ದೊರಕಲಿ ಎಂದು ಬಯಸಲು ಬೇರಾವ ನೀತಿಯೂ ಸಹಾಯ ಮಾಡಲಾದರು. 'ದೇವರು ಮೆಚ್ಚಲಾರ. ಏಕೆಂದರೆ, ಸತ್ಯವೇ ಭಗವಂತ, ಧರ್ಮವೇ ಅವನನ್ನು ಒಲಿಸುವ ಬಗೆ' — ಈ ಬಗೆಯ ಭಾವನೆಯೇ ಎಲ್ಲ ನೀತಿ ಆದರ್ಶಗಳ ಮೂಲವಾಗಿರುತ್ತದೆ. ಆದ್ದರಿಂದ ನೈತಿಕತೆ, ಆದರ್ಶಗಳು ಶ್ರೇಷ್ಠವಾಗಿರುವ ಸಮಾಜ ನಿರ್ಮಾಣಕ್ಕೆ ದೈವೀಪ್ರಜ್ಞೆ ತಾಯಿಬೇರಾಗಿರುತ್ತದೆ. ಕೇವಲ ಸಂವಿಧಾನ, ಕಾನೂನುಗಳು ವಿಧಿಸುವ ನಿಯಮ, ನೀತಿಗಳು ಮಾನವನ ಬದುಕಿನಲ್ಲಿ ಅತ್ಯುಚ್ಚ ಆದರ್ಶ, ನೀತಿಯನ್ನು ಕಟ್ಟಿಕೊಡಲಾರವು.

ಸಮಾಜದಲ್ಲಿ ಕೆಡುಕಿನ, ದುಷ್ಟಶಕ್ತಿಗಳ ವಿಜೃಂಭಣೆ ಕಂಡುಬಂದಾಗ ಎಲ್ಲರೂ ಪ್ರಶ್ನಿಸುತ್ತಾರೆ: ''ಹಾಗಾದರೆ ಸತ್ಯ, ಶಾಂತಿ, ನೀತಿ, ಧರ್ಮ ಇವೆಲ್ಲವೂ ವ್ಯರ್ಥವೆ? ಹೇಳುವವರು, ಕೇಳುವವರು ಯಾರೂ ಇಲ್ಲವೆ? ಹೀಗಾದರೆ ಹೇಗೆ?'' ಆದರೆ ಈ

ಬಗೆಯ ವಿಜೃಂಭಣೆ ಕೂಡ ಒಂದು ಅಲೆಯಂತೆ. ಅದೂ ಕೆಳಕ್ಕೆ ಬೀಳುವ ಸಮಯ ಬೇಗನೆ ಬಂದೇ ಬರುತ್ತದೆ ಎಂಬುದನ್ನು ನಾವು ಮರೆಯಬಾರದು. ಸಂದರ್ಭಾನುಸಾರ ಅದು ತುಸು ವಿಳಂಬವಾದರೂ ಆಗಬಹುದು; ಆದರೆ ಬರುವುದಂತೂ ನಿಶ್ಚಿತ. ಸಮುದ್ರದ ಅಲೆಗಳು ಕೇವಲ ಮೇಲಕ್ಕೆ ಹೋಗುವುದಾಗಲೀ, ಬರೀ ಕೆಳಕ್ಕೆ ಬೀಳುವುದಾಗಲೀ ಸಾಧ್ಯವೆ? ಪ್ರಪಂಚದ ಜೀವನದ ವಿಷಯದಲ್ಲೂ ಇದು ಸತ್ಯ.

### ವಾಸ್ತವತೆ ಹಾಗೂ ಆದರ್ಶ

ಮಾನವನು ಬಯಸುವುದು ಯಾವಾಗಲೂ ಶಾಶ್ವತ ಪರಿಹಾರವನ್ನು. ಶಾಂತಿ, ಸತ್ಯ, ಆನಂದ ಇವುಗಳು ಚಿರಸ್ಥಾಯಿಯಾಗಿ ನಿಂತಿರುವುದು ಈ ಲೋಕದಾಚೆಗಿನ ಪರಬ್ರಹ್ಮನ ನೆಲೆಯಲ್ಲಿ ಮಾತ್ರ. ಈ ಪ್ರಪಂಚದಲ್ಲಿ ಅಂಥ ಅವಸ್ಥೆಯ ಒಂದು ಇಣುಕುನೋಟ ಮಾತ್ರ ಆಗೊಮ್ಮೆ ಈಗೊಮ್ಮೆ (ಅದು ಕೆಲವೇ ಜನ ಭಾಗ್ಯವಂತರಿಗೆ) ದೊರಕಬಲ್ಲದು. ಸಾಮಾನ್ಯ ಜನಜೀವನದಲ್ಲಿ ಏರುಪೇರು, ದ್ವಂದ್ವ ಇವುಗಳು ಅತ್ಯಂತ ಸಹಜವಾಗಿರುತ್ತದೆ. ಹೀಗಾಗಿ ಒಳಿತು–ಕೆಡುಕು, ಸುಖ–ದುಃಖ, ಶಾಂತಿ–ಸಂಘರ್ಷ ಇವು ಯಾವಾಗಲೂ ಜೊತೆಜೊತೆಯಾಗಿ ಸಾಗುತ್ತವೆ; ಒಂದಾದ ಮೇಲೆ ಮತ್ತೊಂದು ಮೇಲಕ್ಕೆ ಎದ್ದು ವಿಜೃಂಭಿಸುತ್ತದೆ. ಇವೆರಡರಲ್ಲಿ ಒಂದೇ ಒಂದು ಮಾತ್ರ ಇರುವ ಸ್ಥಿತಿ ಎಂಬುದು ಕೇವಲ ನಮ್ಮ ಬಯಕೆಯಾಗಿರಬಹುದು; ಆದರೆ ಅದು ಕನಸು ಮಾತ್ರ. 'ಪ್ರಪಂಚದಲ್ಲಿ ನಮ್ಮ ಆಡಳಿತ ಬಂದರೆ ಎಲ್ಲವೂ ಸುಖ, ಸಮೃದ್ಧಿ, ಆನಂದಗಳಿಂದ ನಳನಳಿಸುವುದು' ಎಂದು ಭಾಷಣ ಬಿಗಿಯುವ ನೇತಾರರ ಮಾತುಗಳು ಎಷ್ಟು ಸತ್ಯವೆಂಬುದು ಎಲ್ಲರಿಗೂ ಗೊತ್ತಿದೆ. ಅದೇ ರೀತಿ ಪ್ರಪಂಚವನ್ನೆಲ್ಲ ತನ್ನ ತನ್ನ ಅಂಕೆಯಲ್ಲಿಟ್ಟುಕೊಳ್ಳಬಯಸಿದ, ಅದಕ್ಕಾಗಿ ಎಂಥ ಕ್ರೌರ್ಯವನ್ನೇ ಆಗಲಿ ಮಾಡಲು ಹೇಸದ ಕಂಸನಂಥ, ದುರ್ಯೋಧನನಂಥ, ಹಿಟ್ಲರ್‌ನಂಥ ಜನರ ಆಟವೂ ಹೆಚ್ಚುಕಾಲ ನಡೆಯುವುದಿಲ್ಲ. ಮತ್ತೆ ಪ್ರಪಂಚ ಹೊಸ ಬೆಳಕಿನತ್ತ ಹೊರಳಲೇಬೇಕು.

ವಾಸ್ತವತೆ ಒಂದು, ಜನರು ಬಯಸುವುದು ಇನ್ನೊಂದು. ಇವೆರಡನ್ನೂ ಸಮನ್ವಯಗೊಳಿಸುವುದು ಹೇಗೆ? ವಾಸ್ತವ ಸತ್ಯವನ್ನು ಒಪ್ಪಿಕೊಳ್ಳಬೇಕು ನಿಜ; ಆದರೆ ಸಮಾಜ ಬದಲಾಗಬಲ್ಲದು, ಉತ್ತಮವಾಗಬಲ್ಲದು ಎಂಬ ಕನಸನ್ನು ಕಾಣುವುದೂ ಮುಖ್ಯ. 'ಇಂದಿನ ಕನಸೇ ನಾಳಿನ ವಾಸ್ತವ' ಎಂಬ ಮಾತಿನಂತೆ ಪರಿವರ್ತನೆಯಿಂದ ನಮ್ಮ ಬದುಕು ಉತ್ತಮಗೊಳ್ಳುವುದು ಎಂಬ ಪ್ರತೀಕ್ಷೆಯೇ ಇಲ್ಲದೆ ಹೋದರೆ, ಸಮಾಜಕ್ಕೆ ಭರವಸೆ ನೀಡಬಲ್ಲ ಸಂಗತಿಯಾದರೂ ಏನು ಉಳಿದೀತು?

### ವೈಯಕ್ತಿಕ ನೆಲೆಯ ಆದರ್ಶಗಳು

ಜಗತ್ತಿನಲ್ಲಿ ಯಾರೂ ಮೀರಲಾಗದ, ಯಾರಿಂದ ಏನನ್ನೂ ಮಾಡಲಾಗದ ಅಬಾಧಿತ ನಿಯಮವೊಂದಿದೆ. ಅದೇ ಕರ್ಮ ನಿಯಮ. 'ಮಾಡಿದ್ದುಣ್ಣೋ ಮಹಾರಾಯ' ಎಂಬ ಗಾದೆ ಮಾತಿನ ಮೂಲಕ ಇದರ ಆಶಯವನ್ನು ಹೇಳುತ್ತೇವೆ. ಮನುಷ್ಯ ಕೆಟ್ಟದನ್ನು ಮಾಡಿದರೆ, ದುಷ್ಟ ಪ್ರವೃತ್ತಿಗಳನ್ನು ನಿಯಂತ್ರಿಸದಿದ್ದರೆ, ಅದರ ಫಲವನ್ನು ಅವನು ಅನುಭವಿಸಲೇಬೇಕು ಎಂದು ಇದು ಹೇಳುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಈ ಬಗೆಯ ನೈತಿಕ ಪಾಠವನ್ನು ಬಾಲ್ಯದಿಂದಲೇ ಕೇಳುತ್ತೇವೆ. ಇಂತಹ ತರಬೇತಿಯಿಂದ ನಮ್ಮ ಸಮಾಜಕ್ಕೆ ಅಗತ್ಯವಾದ ಎಲ್ಲ ನೈತಿಕ, ಮೌಲಿಕ ಪಾಠಗಳು ದೊರೆಯುತ್ತವೆ. ಅನೇಕ ಬಗೆಯ ದುಷ್ಟಪ್ರವೃತ್ತಿಗಳ ನಿಯಂತ್ರಣ ಇದರಿಂದ ಸಾಕಷ್ಟು ಉಂಟಾಗುತ್ತದೆ. ಅಷ್ಟಾದರೂ ಜನರು ಕೆಟ್ಟ ಮಾರ್ಗವನ್ನು ಬಿಡದಿದ್ದರೆ? — ಆಗ ಕರ್ಮವೇ ಅವರಿಗೆ ಪಾಠ ಕಲಿಸುವುದು. ಅನುಭವದಿಂದಲೇ ಅವರು ಕಲಿಯಬೇಕಾಗುವುದು. ಏಟು ತಿಂದಾಗ, ಬುದ್ಧಿವಂತರ–ವಿವೇಕಿಗಳ ಮನಸ್ಸಿನಲ್ಲಿ ಅದು ಆಳವಾಗಿ ಉಳಿದುಕೊಳ್ಳುತ್ತದೆ; ಮುಂದಿನ ಬಾರಿ ತಪ್ಪು ಮಾಡದಂತೆ ಎಚ್ಚರ ವಹಿಸುತ್ತಾರೆ. ಎಷ್ಟು ಬಾರಿ ಹೊಡೆತ ತಿಂದರೂ ಬುದ್ಧಿಬಾರದ, ಪಾಠ ಕಲಿಯದ ಜನರು, ಶ್ರೀರಾಮಕೃಷ್ಣರು ಹೇಳುವಂತೆ, 'ನೆಗ್ಗಲು ಮುಳ್ಳನ್ನು ತಿನ್ನುವ' ಒಂಟೆಯಂತೆ. ಒಂಟೆಗೆ ನೆಗ್ಗಲು ಮುಳ್ಳು ಕಣ್ಣಿಗೆ ಬಿದ್ದ ಕೂಡಲೇ ಅದನ್ನು ತಿನ್ನಬೇಕೆನಿಸುತ್ತದೆ. ಆದರೆ ಮುಳ್ಳನ್ನು ತಿಂದಾಗ ಅದರ ಬಾಯಲ್ಲಿ ರಕ್ತವೊಸರುತ್ತದೆ. ರಕ್ತವೂ ಒಂದು ರೀತಿ ಅದಕ್ಕೆ ರುಚಿಕರವೆನಿಸಿ, ಆ ರಕ್ತವನ್ನೇ ಒಂಟೆ ಚೀಪುತ್ತದೆ. ರಕ್ತ ಹೊರಬಂದಾಗ ನೋವಂತೂ ಆಗುತ್ತದೆ; ಆದರೂ ಅದು ಮುಳ್ಳು ತಿನ್ನುವುದನ್ನು ಬಿಡಲಾರದು. ಹಲವು ಜನ ಮತ್ತೆ ಮತ್ತೆ ತಪ್ಪು ಮಾಡುವುದು ಇದೇ ರೀತಿ.

ಸಮಾಜ, ಪ್ರಪಂಚ ಅಂಧಕಾರದ, ಕೆಡುಕಿನ ಹಿಡಿತದಲ್ಲಿ ಸಿಕ್ಕು ನರಳುತ್ತಿರಬಹುದು. ಜನಸಾಮಾನ್ಯರು ಅದರಿಂದ ಒದ್ದಾಡುತ್ತಿರಬಹುದು. ಯಾರೂ ಏನನ್ನೂ ಮಾಡಲಾಗದ ಸ್ಥಿತಿಯಲ್ಲಿರಬಹುದು. ಆದರೆ ಪ್ರತಿಯೊಬ್ಬ ಪ್ರಜ್ಞಾವಂತ ಮಾನವನೂ ಆಂತರಿಕವಾಗಿ ಆ ಸ್ಥಿತಿಯಿಂದ ಹೊರಬರಲು ಹಪಹಪಿಸುತ್ತಿರುತ್ತಾನೆ. 'ಮಾಡಿದನ್ನು ಅನುಭವಿಸಲೇಬೇಕು. ಕಡೇ ಪಕ್ಷ ನನ್ನ ಪಾಲಿಗಾದರೂ ನಾನು ಉತ್ತಮನಾಗಿರಬೇಕು. ಇತರರಿಗೆ ಕೆಡುಕನ್ನು ಬಗೆಯಬಾರದು. ಇದೇ ಶಾಂತಿ, ಧರ್ಮ ಹಾಗೂ ಸತ್ಯದ ದಾರಿ' ಎಂದು ಮನಸ್ಸಿನಲ್ಲಿ ಸ್ಥಿರವಾಗಿ ಭಾವಿಸುತ್ತಾನೆ. ಇಂಥ ನೈತಿಕ, ಆಧ್ಯಾತ್ಮಿಕ ಹಾಗೂ ವೈಯಕ್ತಿಕ ಧರ್ಮವೇ ಎಲ್ಲ ಕೆಡುಕನ್ನು ಮೆಟ್ಟಿ ನಿಂತು ಸಮಾಜವನ್ನು ಎಲ್ಲ ಬಗೆಯ ಏರುಪೇರುಗಳ ನಡುವೆ ಮುನ್ನಡೆಸಬಲ್ಲದು! 'ಹನಿಗೂಡಿ ಹಳ್ಳ' ಎಂಬಂತೆ, ಒಬ್ಬೊಬ್ಬ ವ್ಯಕ್ತಿ ಕೂಡ ತನ್ನ ಪಾಲಿಗೆ ತಾನು ಸರಿಯಾದ ಪಥದಲ್ಲಿ ನಡೆಯುವಂತಾದರೆ, ಅದೇ ಸಮಾಜದ ಉನ್ನತಿ ಎನ್ನಬೇಕು. ❁

### ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೫ | ಭಾನುವಾರ | ಏಕಾದಶಿ |
| ೨೦ | ಮಂಗಳವಾರ | ಏಕಾದಶಿ |
| ೨೪ | ಶನಿವಾರ | ಗುರುಪೂರ್ಣಿಮೆ |